ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1315 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 29.12.2022 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

....

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಡಿ.ಎ ನಿರ್ಮಿಸಲು ಉದ್ದೇಶಿಸಿರುವ ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಗೆ ಸೇರುವ ಗ್ರಾಮಗಳು ಯಾವುವು; | ಡಾ. ಕೆ.ಶಿವರಾಮ ಕಾರಂತ ಬಡಾವಣೆಯಲ್ಲಿ ಸೋಮಶೆಟ್ಟಿಹಳ್ಳಿ, ಲಕ್ಷ್ಮಿಪುರ, ಗಾಣಿಗರಹಳ್ಳಿ, ಬ್ಯಾಲಕೆರೆ, ಕಾಳತಮ್ಮನಹಳ್ಳಿ, ಗುಣಿಅಗ್ರಹಾರ, ಕೆಂಪಾಪುರ, ಮೇಡಿಅಗ್ರಹಾರ, ಆವಲಹಳ್ಳಿ, ವಡೇರಹಳ್ಳಿ, ರಾಮಗೊಂಡನಹಳ್ಳಿ, ಕೆಂಪನಹಳ್ಳಿ, ವೀರಸಾಗರ, ದೊಡ್ಡಬೆಟ್ಟಹಳ್ಳಿ, ಹಾರೋಹಳ್ಳಿ, ಶ್ಯಾಮರಾಜಪುರ ಮತ್ತು ಜಾರಕಬಂಡೆಕಾವಲ್ ಗ್ರಾಮಗಳು ಒಳಗೊಂಡಿರುತ್ತವೆ. |
| ಆ | ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾದ ದಿನಾಂಕ ಯಾವುದು; ಬಿ.ಡಿ.ಎಯ ವಿಳಂಬ ದೋರಣೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬಡಾವಣೆ ನಿರ್ಮಾಣ ಕಾರ್ಯವನ್ನು ತುರ್ತಾಗಿ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಡಾ. ಕೆ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಸಂಖ್ಯೆ: BDA/ Commr/DC(LA)/SLAO/A5/PR/283/2008/09, ದಿನಾಂಕ:30/12/2008 ರಂತೆ 3546 ಎಕರೆ 12 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/ 553/ಎಂಎನ್‌ಎಕ್ಸ್/2018 ದಿನಾಂಕ: 30/10/2018 ರಂತೆ 3546 ಎಕರೆ 12 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅಧಿಸೂಚನೆಯಲ್ಲಿ ಒಳಗೊಂಡಿರುವ ಜಮೀನುಗಳಲ್ಲಿ ಪ್ರಸ್ತುತ 2562 ಎಕರೆ 10.5 ಗುಂಟೆ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಈವರೆಗೂ 2282 ಎಕರೆ 30.25 ಗುಂಟೆ ಜಮೀನುಗಳನ್ನು ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ ಹಾಗೂ ಬಡಾವಣೆ ರಚನೆ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದಂತೆ "RMP-2015 Road & Bye-Pass Road to Improve Connectivity in Dr. K. Shivarama Karantha Layout" ಗಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: BDA/DC(LA)/156/2021-22 ದಿನಾಂಕ: 18/02/2022 ರಂತೆ 47 ಎಕರೆ 1.5 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ತದನಂತರ ಸಂಖ್ಯೆ: ಯುಡಿಡಿ/3/ಎಂಎನ್‌ಎಕ್ಸ್/2022(E), ದಿನಾಂಕ: 06/08/2022 ರಂತೆ 45 ಎಕರೆ 17.25 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅಧಿಸೂಚನೆಯಲ್ಲಿ ಒಳಗೊಂಡಿರುವ ಜಮೀನುಗಳಲ್ಲಿ 14 ಎಕರೆ 09.50 ಗುಂಟೆ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಸದರಿ 14 ಎಕರೆ 09.50 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ ಹಾಗೂ ಬಡಾವಣೆ ರಚನೆ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>Dr. K. Shivarama karantha Layout (Left out land in the PN & FN which are identified within the Layout) ಯೋಜನೆಗಾಗಿ ಅಧಿಸೂಚನೆ ಸಂಖ್ಯೆ: BDA/DC(LA)/67/2022-23 ದಿನಾಂಕ: 19/08/2022 ರಂತೆ 245 ಎಕರೆ 16 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ನಂತರ ಸಂಖ್ಯೆ: ಯುಡಿಡಿ/265/ಎಂಎನ್‌ಎಕ್ಸ್/2022(ಇ) ದಿನಾಂಕ: 18/10/2022 ರಂತೆ 245 ಎಕರೆ 16 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಭೂಸ್ವಾಧೀನವಾಗಿರುವ ಜಮೀನುಗಳಿಗೆ ಐತೀರ್ಪು ರಚಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಇ | ಇಲ್ಲಿಯವರೆಗೆ ಎಷ್ಟು ರೈತರು ತಮ್ಮ ಭೂಮಿಯನ್ನು ಬಿಟ್ಟುಕೊಟ್ಟು ಪರಿಹಾರದ ಅರ್ಹತಾ ಪ್ರಮಾಣ ಪತ್ರ ಪಡೆದಿದ್ದಾರೆಯೇ? | ಈವರೆಗೂ 132 ಅರ್ಹತಾ ಪ್ರಮಾಣ ಪತ್ರವನ್ನು ರೈತರಿಗೆ ವಿತರಿಸಲಾಗಿರುತ್ತದೆ. |

ಸಂಖ್ಯೆ: ನಅಇ 401 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ